(ಇಂದು ದಿನಾಂಕ:27-11-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಶ್ರೀ ಎಸ್ ಬಿ ಅರ್ಜಿದಾರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು |
| ನಿ.ಪಿ.2 | ದೂರಿನ ಧೃಡಿಕೃತ ನಕಲು |
| ನಿ.ಪಿ.3 | ಅಂತಿಮ ವರದಿಯ ಧೃಡಿಕೃತ ನಕಲು |
| ನಿ.ಪಿ.4 | ಗುನ್ಹಾ ಸ್ಥಳದ ಪಂಚನಾಮೆಯ ಧೃಡಿಕೃತ ನಕಲು |
| ನಿ.ಪಿ.5 | ಶವ ತನಿಖಾ ವರದಿಯ ಧೃಡಿಕೃತ ನಕಲು |
| ನಿ.ಪಿ.6 | ಶವ ಪರೀಕ್ಷಾ ವರದಿಯ ಧೃಡಿಕೃತ ನಕಲು |
| ನಿ.ಪಿ.7 | ವಾಹನ ತಪಾಸಣಾ ವರದಿಯ ಧೃಡಿಕೃತ ನಕಲು |

**ಪಾಟೀ ಸವಾಲುಃ ಎದುರುದಾರರ ನಂ.2 ಪರ ಶ್ರೀ ಯು ಕೆ ವಾಯ್ ವಕೀಲರಿಂದ.**

1. ನನ್ನ ಮಗನಿಗೆ 24 ವರ್ಷ ವಯಸ್ಸು ಇತ್ತು. ನನ್ನ ಮಗನಿಗೆ 24 ವರ್ಷ ವಯಸ್ಸು ಅಂತಾ ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ನನ್ನ ಮಗ ಶಾಲೆ ಕಲಿತಿರುತ್ತಾನೆ. ನನ್ನ ಮಗನ ಶಾಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅಪಘಾತದ ದಿನ ನನ್ನ ಮಗ ನಡೆಸುತ್ತಿದ್ದ ಮೋ.ಸೈ. ವಾಹನದ ಮಾಲೀಕರನ್ನು ಮತ್ತು ವಿಮಾ ಕಂಪನಿಯವರನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಮಗನಿಗೆ 24 ವರ್ಷ ವಯಸ್ಸು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ

ಕುಟುಂಬಕ್ಕೆ ಸಂಬಂಧಪಟ್ಟಂತೆ ಯಾವುದೇ ಜಮೀನು ಇರುವುದಿಲ್ಲ. ನನಗೆ ಇಬ್ಬರು ಮಕ್ಕಳು. ಮೊದಲನೇದವನು ನನ್ನ ಮಗ, ನಂತರ ಮಗಳು ಹುಟ್ಟಿರುತ್ತಾಳೆ. ನನ್ನ ಮಗಳಿಗೆ ಮದುವೆ ಆಗಿರುತ್ತದೆ. ನನ್ನ ಮಗನಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಲನಾ ಪರವಾನಿಗೆ ಇದ್ದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ಮಗ ಅಪಘಾತದ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದ್ದ ವಿಷಯ ನನಗೆ ಗೊತ್ತಿದ್ದರೂ ಕೂಡಾ ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ಬಸ್ ಚಾಲಕ ರಸ್ತೆ ನಿಯಮಗಳನ್ನು ಪಾಲಿಸಿಕೊಂಡು ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಬಸ್ ಚಾಲಕನು ಅಪಘಾತದ ದಿನ ತನ್ನ ವಾಹನವನ್ನು ನಿಧಾನವಾಗಿ ನಡೆಸಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ಆರೋಗ್ಯವಾಗಿ ಇದ್ದು ವರ್ಷಕ್ಕೆ ಒಕ್ಕಲುತನದಿಂದ ರೂ.4 ಲಕ್ಷ ದುಡಿಯುತ್ತಿದ್ದ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ಗಂಡನ ಆರೋಗ್ಯದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡ ಆರೋಗ್ಯವಾಗಿದ್ದು, ಈಗಲೂ ದುಡಿಯುತ್ತಾನೆ ಎಂದರೆ ಸರಿಯಲ್ಲ. ಮೋ.ಸೈ. ಮಾಲೀಕ ಮತ್ತು ವಿಮಾ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರು, ಬಸ್ ಚಾಲಕರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು